# ರಾಮ ಗೋವಿಂದ ಸೀತಾ ರಾಮ ಗೋವಿಂದ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
3. **Note:** Lyrics mentioned without highlights are as per Ref. 1 and the lyrics given in yellow highlights are as per Ref. 2. There are few minor differences in these references. Hence, they are given separately.
4. **Note:** Singer has followed lyrics as in Ref. 1. But there are few differences in the wordings used by the singer.
5. **Note:** The Ankita is different in both the books. We have considered book in Ref.2 as standard and taken that Ankita for listing.

| | |
|---|---|
| ರಾಗ: ಸೌರಾಷ್ಟ್ರ ತಾಳ: ಅಟ | ರಾಗ: ಮಾಂಡ ತಾಳ: ಆದಿ |
| | |
| ರಾಮ ಗೋವಿಂದ ಸೀತಾರಾಮ ಗೋವಿಂದ ‖ ಪ ‖ | ರಾಮ ಗೋವಿಂದ ಸೀತಾ ರಾಮ ಗೋವಿಂದ |
| | |
| ತೃಪ್ತಿ ಹೌದೆ ಹೆತ್ತ ತಾಯಿ ಇಕ್ಕದನಕ | ತೃಪ್ತಿಯಹುದೆ ಹೆತ್ತ ತಾಯಿ ಇಕ್ಕದನಕ |
| ಭಕ್ತಿ ಹೌದೆ ಭಕ್ತ ಜನರ ಸಲಹದನಕ | ಭಕ್ತಿಯಹುದೆ ಭಕ್ತಜನರ ಸಲಹದನಕ |
| ಮುಕ್ತಿ ಹೌದೆ ಭಾವಶುದ್ಧಿ ಇಲ್ಲದನಕ | ಮುಕ್ತಿಯಹುದೆ ಭಾವಶುದ್ಧಿ ಇಲ್ಲದನಕ |
| ಚಿತ್ತಶುದ್ಧಿ ಆತ್ಮನಿಜವು ತಿಳಿಯದನಕ ‖ 1 ‖ | ಚಿತ್ತಶುದ್ಧಿ ಆತ್ಮನಿಜವು ತಿಳಿಯದನಕ |
| | |
| ಓದಲೇತಕೋ ಮನದಿ ವಿಜ್ಞಾನವಿಲ್ಲದನಕ | ಓದಲೇಕೊ ಮನದಿ ಜ್ಞಾನವಿಲ್ಲದನಕ |
| ಭೇದವೇತಕೊ ಗತಿಯು ಗಮನ ತಿಳಿಯದನಕ | ಭೇದವೇಕೊ ಗತಿಯು ಗಮನ ತಿಳಿಯದನಕ |
| ಕದನವೇತಕೊ ಭುಜದಿ ಶಕ್ತಿ ಇಲ್ಲದನಕ | ಕಾದಲೇಕೊ ಭುಜದಿ ಶಕ್ತಿಯಿಲ್ಲದನಕ |
| ವಾದವೇತಕೊ ಶ್ರುತಿಯು ಶಾಸ್ತ್ರ ತಿಳಿಯದನಕ ‖ 2 ‖ | ವಾದವೇಕೊ ಶ್ರುತಿ- ಶಾಸ್ತ್ರ ತಿಳಿಯದನಕ |
| | |
| ನಳಿನವಿದ್ದರೇನು ತುಂಬಿ ಒದಗದನಕ | ನಳನವಿದ್ದರೇನು ತುಂಬಿಯೊದಗದನಕ |
| ದಳವಿದ್ದರೇನು ಧೈರ್ಯ ಕೂಡದನಕ | ದಳವು ಇದ್ದರೇನು ಧೈರ್ಯಕೊಡದನಕ |
| ಲಲನೆ ಇದ್ದರೇನು ಪುತ್ರರಿಲ್ಲದನಕ | ಲಲನೆಯಿದ್ದರೇನು ಪುತ್ರರಿಲ್ಲದನಕ |
| ಚೆಲುವನಾದರೇನು ವಿದ್ಯೆ ಕಲಿಯದನಕ ‖ 3 ‖ | ಚೆಲುವನಾದರೇನು ವಿದ್ಯೆ ಕಲಿಯದನಕ |
| | |
| ವನವಿದೇತಕೊ ಶುಕ ಕೋಕಿಲ ಇಲ್ಲದನಕ | ಮನವಿದ್ದೇಕೊ ಶುಕ – ಪಿಕವಿಲ್ಲದನಕ |
| ತನುವಿದೇತಕೊ ಪರರ ಹಿತಕೆ ಬಾರದನಕ | ತನುವಿದ್ದೇಕೊ ಪರಹಿತಕೆ ಬಾರದನಕ |

| | |
|---|---|
| ಮನೆಯಿದೇತಕೊ ಅತಿಥಿ ಬಂದಾರಿಲ್ಲದನಕ | ಮನೆಯಿದ್ದ್ವೇಕೊ ಅತಿಥಿಯೊಬ್ಬರಿಲ್ಲದನಕ |
| ಧನವಿದೇತಕೊ ದಾನಧರ್ಮಕ್ಕೊದಗದನಕ || 4 || | ಧನವಿದ್ದರೇನು ದಾನ – ಧರ್ಮಕ್ಕೊದಗದನಕ |
| | |
| ಹರಿಯ ಚಿಂತೆ ಇರಲು ಅನ್ಯ ಚಿಂತೆಯೇತಕೊ | ಹರಿಯ ಚಿಂತೆಯಿರಲು ಅನ್ಯ ಚಿಂತೆಯೇತಕೊ |
| ಹರಿಯ ಧ್ಯಾನವಿರಲು ಅನ್ಯ ಧ್ಯಾನವೇತಕೊ | ಹರಿಯ ಧ್ಯಾನವಿರಲು ಅನ್ಯ ಧ್ಯಾನವೇತಕೊ |
| ಹರಿಯು ಒಲಿದ ಮನುಜನಿಗೆ ದೈನ್ಯವೇತಕೊ | ಸಿರಿ ಪುರಂದರ ವಿಠಲನಿರಲು ಭಯವು ಏತಕೊ |
| ಸಿರಿ ವರದ ಪುರಂದರ ವಿಠಲನಿರಲು ಭಯವು ಏತಕೊ || 5 || | ಹರಿಯು ಒಲಿದ ಮನುಜನಿಗೆ ದೈನ್ಯವೇತಕೊ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಹಾಡಿನಲ್ಲಿ ದಾಸರು ಜೀವನದ ಆದರ್ಶದ ಕೆಲವು ಮಾತುಗಳನ್ನು ಉದಾಹರಣೆಗಳೊಂದಿಗೆ ಹೇಳಿದ್ದಾರೆ.

**ನಿಜ** = ನಿಜ ಜ್ಞಾನ

**ದಳ** = ಸೈನ್ಯ

**Classification:** Keerthane
**Ankita:** siri purandara vittala
**Location:** NA
**Category:** Rama Stuti, Jeevanoddhara
**Sub-Category:** Krishna, rama, govinda, tayi, jana, mukti, bhava, mana, jnana, shruti, shastra, maga, vidya, kaadu, deha, mane, rokka, dAna, dharma, chinte, dhyAna,
**Pravachana:** NA
**Explanation:** NA